ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಎಂ. ಎ. ರಶೀದ್ ಬಗ್ಗೆ ಮಧ್ಯಾಹ್ನ ಚರ್ಚೆ ಮಾಡುವುದಕ್ಕೆ ಅವಕಾಶಕೊಡಿ.

ಅಧ್ಯಕ್ಷರು.—ಎಂ. ಎ. ರಶೀದೂ ಇಲ್ಲ. ಏನೂ ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾನು ಹೇಳಿಕೆ ಕೊಡುವುದಿಲ್ಲ ಎಂದು.....

ಅಧ್ಯಕ್ಷರು.—ಇವತ್ತು ಬರಗಾಲದ ಬಗ್ಗೆ ಮಹತ್ವದ ಚರ್ಚೆ ಇದೆ. ನಡುವೆ ಯಾವುದೂ ಬೇಡ. ರಶೀದನ ಚರ್ಚೆ ನಿನ್ನೆಯೇ ಮುಗಿದಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಪಿಷ್ಟರ್ಷನ್ ಪಾಯಿಂಟ್ ನೋಟೀಸ್ ಕೊಡಿ, ಚರ್ಚೆ ಆಮೇಲೆ ತೆಗೆದುಕೊಳ್ಳೋಣ ಎಂದು ಹೇಳಿದ್ದೀರಿ.

ಅಧ್ಯಕ್ಷರು.—ನಾನು ಹಾಗೇ ಹೇಳಿಲ್ಲ. ದಯವಿಟ್ಟು ಕುಳಿತುಕೊಳ್ಳಿ ಬರಗಾಲದ ಬಗ್ಗೆ ಚರ್ಚೆ ಶುರು ಮಾಡೋಣ.

ಮುನವಿಗಳು : 1) ರಶೀದ್ ಅಡ್ವೋಕೇಟ್, ಇವರ ಕೊಲೆಯ ಬಗ್ಗೆ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಮುಖ್ಯಮಂತ್ರಿಗಳು ನಿನ್ನೆ ನೂರಾರು ವಕೀಲರು ಗಳನ್ನು ಭೇಟಿಯಾಗಿ, ಇಲ್ಲಿ ಸದನದಲ್ಲಿ ಸ್ಟೇಟ್‌ಮೆಂಟ್ ಕೊಡುವುದಿಲ್ಲವೆಂದು ಹೇಳಿ ಪ್ರೆಸ್ ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ. ಅದರಲ್ಲಿ ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಇದರಲ್ಲಿ ಕೆಲವು ರಾಜ್ಯಕೀಯ ವ್ಯಕ್ತಿಗಳ ಕೈವಾಡ, ಹಣ ಉಳ್ಳವರ ಕೈವಾಡ ಇದೆಯೆಂದು ಕೂಡ ಪ್ರಸ್ತಾಪ ಮಾಡಿದ್ದಾರೆ. ಯಾವ ವಿಷಯವನ್ನು ಸದನಕ್ಕೆ ಹೇಳಿಲ್ಲವೋ ಅದನ್ನು ಪ್ರೆಸ್‌ನಲ್ಲಿ ಹೇಳಿದ್ದಾಕೆ.

ಅಧ್ಯಕ್ಷರು.—ಬರಗಾಲದ ಬಗ್ಗೆ ಮಾತನಾಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾವು ಏನು ಪ್ರಸ್ತಾಪ ಮಾಡುತ್ತೇವೆನ್ನುವುದನ್ನು ಕೂಡ ಕೇಳದೆ ತಾವು ನಿನ್ನೆ ಸದನವನ್ನು ಮುಂದೂಡಿ ಹೋದಿರಿ. ವಿಷಯವನ್ನು ಪ್ರಸ್ತಾಪ ಮಾಡುವುದಕೆ ಅವಕಾಶ ಕೊಡಬೇಡವೆ ?

ಅಧ್ಯಕ್ಷರು.—ವಿಷಯ ನಿನ್ನೆಯೇ ಮುಕ್ತಾಯವಾಗಿದೆ, ಮುಖ್ಯಮಂತ್ರಿಯವರು ಸಿ.ಬಿ.ಐ. ಎನ್‌ಕ್ವೈರಿ ಮಾಡಿಸುವುದಕ್ಕೆ ತಿಳಿಸಿದ್ದೇವೆಂದು ಹೇಳಿದ್ದಾರೆ. ತಾವು ಈಗ ಯಾವ ನಿಯಮದ ಪ್ರಕಾರ ಹೇಳುವುದಕ್ಕೆ ಹೊರಟಿದ್ದೀರಿ.

(ಗೊಂದಲ)

ಅಧ್ಯಕ್ಷರು.—ಈಗ ಮಾನ್ಯ ಸದಸ್ಯರು ಬರಗಾಲದ ಪರಿಸ್ಥಿತಿಯ ಬಗ್ಗೆ ಮಾತನಾಡಬೇಕು.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ತಾವು ಯಾವ ನಿಯಮ ಎಂದು ಕೇಳಿದಿರಿ.

(ಗೊಂದಲ)

ಅಧ್ಯಕ್ಷರು.—ಮಾನ್ಯ ಸದಸ್ಯರೆಲ್ಲರೂ ದಯವಿಟ್ಟು ಕುಳಿತುಕೊಳ್ಳಬೇಕು.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೆ, ತಾವು ಒಂದೇ ಸಾರಿಗೆ ಈ ರೀತಿ ಹೇಳಿದರೆ ನಾವು ಏನು ಮಾಡಬೇಕು.

(ಗೊಂದಲ)

ಅಧ್ಯಕ್ಷರು.—ಮಾನ್ಯ ಸದಸ್ಯರು ದಯವಿಟ್ಟು ಕುಳಿತುಕೊಳ್ಳಬೇಕು.

ಶ್ರೀ ಎಸ್. ಬಂಗಾರಪ್ಪ,--ಮಾನ್ಯ ಅಧ್ಯಕ್ಷರೆ, ನಿನ್ನೆಯ ದಿವಸ ಸದನ ಪ್ರಾರಂಭವಾಗುವ ಸಮಯಕ್ಕೆ ನಾವು ಮಾನ್ಯ ಸದಸ್ಯರು ರುಜು ಮಾಡಿ ಎರಡು ವೂರು ನಿಲುವಳಿ ಸೂಚನೆಗಳನ್ನು ಕಳುಹಿಸಿಕೊಟ್ಟಿದ್ದೆವು. ಹಾಗೆಯೇ ಬರಗಾಲದ ಬಗ್ಗೆ ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿಕೊಟ್ಟಿದ್ದೆವು. ಸರ್ಕಾರದವರು ಬರಗಾಲದ ಬಗ್ಗೆ ಚರ್ಚೆಗೆ ಒಪ್ಪಿದ್ದರಿಂದ ನಿನ್ನೆಯೇ ಚರ್ಚೆ ಪ್ರಾರಂಭವಾಗಿದೆ. ಇವೊತ್ತು ಆ ಚರ್ಚೆ ಮುಂದುವರೆಯಬೇಕೆಂದು ನಮ್ಮೆಲ್ಲರ ಅಭಿಪ್ರಾಯ. ಕರ್ನಾಟಕ ರಾಜ್ಯದ ಬರಗಾಲ ಪರಿಸ್ಥಿತಿಯ ಬಗೆಗಿನ ಚರ್ಚೆಯಲ್ಲಿ ನಾವೆಲ್ಲರೂ ಭಾಗವಹಿಸಬೇಕು. ಆದೇ ನಿಯಮಾವಳಿ ಪ್ರಕಾರ ಮಂಗಳೂರು ಕೆಮಿಕಲ್ಸ್ ಆಂಡ್ ಫರ್ಟಿಲೈಸರ್ಸ್ ಕಾರ್ಖಾನೆಯ ವಿಚಾರದಲ್ಲಿಯೂ ನಿಲುವಳಿ ಸೂಚನೆಯನ್ನು ಕಳುಹಿಸಿಕೊಟ್ಟಿದ್ದೇವೆ.....

ಅಧ್ಯಕ್ಷರು.--ಬರಗಾಲದ ಪರಿಸ್ಥಿತಿಯ ಬಗ್ಗೆ ಇನ್ನೂ ಇಪ್ಪತ್ನಾಲ್ಕು ಜನ ಸದಸ್ಯರು ಮಾತನಾಡುವವರು ಇದ್ದಾರೆ. ಬಿಸಿನೆಸ್ ಆಡ್ವೈಸರಿ ಕಮಿಟಿ ತೀರ್ಮಾನದ ಪ್ರಕಾರ ಇದು ಮುಗಿಯಬೇಕು. ಮಾನ್ಯ ವೀರಪ್ಪ ಮೊಯಿಲಿಯವರು ಮತ್ತು ಮಾನ್ಯ ಎಂ. ಎಸ್. ಕೃಷ್ಣನ್. ಅವರು ಕಳುಹಿಸಿಕೊಟ್ಟಿರುವಂಥಾದ್ದು ಬೇರೆ ಇದೆ. ಇವನ್ನೆಲ್ಲಾ ತಾವು ಗಮನದಲ್ಲಿಟ್ಟುಕೊಂಡು ಹೇಳಬೇಕು.

ಶ್ರೀ ಬಿ. ಎಸ್. ಯಡಿಯೂರಪ್ಪ.--ಗಮನ ಸೆಳೆಯುವ ಸೂಚನೆ ಮತ್ತು ನಿಯಮ ೩೭ಳಿರಲ್ಲಿ ಪ್ರಸ್ತಾಪ ಮಾಡತಕ್ಕ ಅವಕಾಶ ಏನಿತ್ತು, ಅದು ಈ ಬರಗಾಲದ ಚರ್ಚೆ ಇರುವುದರಿಂದ ಅದನ್ನೆ ಮುಂದೂಡಲಾಗಿದೆ. ಇವೊತ್ತು ಅನೇಕ ಸಮಸ್ಯೆಗಳನ್ನು ನಾವು ಇಲ್ಲಿ ಚರ್ಚೆ ಮಾಡಬೇಕಾಗಿದೆ. ಇನ್ನು ಸಮಾರು ೮-೧೦ ದಿವಸ ಮಾತ್ರ ನಾವು ಇಲ್ಲಿ ಸೇರುತ್ತಿದ್ದೇವೆ. ಆದ್ದರಿಂದ, ನಾಳೆಯಿಂದಲಾದರೂ ಗಮನ ಸೆಳೆಯುವ ಸೂಚನೆ ಮತ್ತು ನಿಯಮ ೩೭ಳಿಕ್ಕೆ ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು.—ಬರಗಾಲದ ಬಗ್ಗೆ ಚರ್ಚೆ ಇದ್ದ ಪ್ರಯುಕ್ತ ಅವನ್ನು ಮುಂದಕ್ಕೆ ಹಾಕಿದ್ದೇವೆ.

ಶ್ರೀ ಎಂ. ಎಸ್. ಕೃಷ್ಣನ್. — ಅಧ್ಯಕ್ಷರೇ, ಮಂಗಳೂರಿನ ಕೆಮಿಕಲ್ಸ್ ಆಂಡ್ ಫರ್ಟಿಲೈಸರ್ಸ್ ಕಾರ್ಖಾನೆಯ ವಿಚಾರ ಚರ್ಚೆಯಾಗಬೇಕಾಗಿದೆ. ನಿನ್ನೆಯ ದಿವಸ ಮಾನ್ಯ ಮಂಖ್ಯ ಮಂತ್ರಿಗಳು ಹೇಳಿಕೆಯನ್ನು ಕೊಟ್ಟಿದ್ದರ ಬಗ್ಗೆ ಈಗ ಪ್ರಸ್ತಾಪ ನಡೆಯಂತ್ತಿದೆ. ಇನ್ನೂ ಹಲವಾರ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡಬೇಕಾಗಿರುವುದರಿಂದ ಅವುಗಳಿಗೆಲ್ಲಾ ತಾವು ಅವಕಾಶ ಮಾಡಿಕೊಡಬೇಕು. ವಿಶ್ವವಿದ್ಯಾನಿಲಯದ ಉಪಾಧ್ಯಾಯರು ೧೫-೨೦ ದಿವಸಗಳಿಂದಲೂ ಮುಷ್ಕರ ನಡೆಸುತ್ತಿದ್ದಾರೆ. ಅವರು ಮೆರವಣಿಗೆ ಎಲ್ಲಾ ನಡೆಸಿದ್ದಾರೆ. ಅದರ ಬಗ್ಗೆ ಚರ್ಚೆ ನಡೆಯಬೇಕಾಗಿದೆ.

ಅಧ್ಯಕ್ಷರು.— ಹಾಗಾದರೆ ಬರಗಾಲದ್ದು ಬಿಟ್ಟುಬಿಟ್ಟು ಇವನ್ನೆಲ್ಲಾ ತೆಗೆದುಕೊಂಡು ಮುಗಿಸಿ ಬಿಡೋಣವೇನು.

ಶ್ರೀ ಎಂ. ವೀರಪ್ಪ ಮೊಯಿಲಿ.— ಅಧ್ಯಕ್ಷರೇ, ಈ ಸಮಸ್ಯೆ ಉದ್ಭವವಾಗುತ್ತಾ ಇರಲಿಲ್ಲ. ನಿನ್ನೆಯ ದಿವಸ ಮಾನ್ಯ ಬೊಮ್ಮಾಯಿಯವರು ರಸೀದ್ ಪ್ರಕರಣದ ಬಗ್ಗೆ ಹೇಳಿಕೆ ಕೊಡುತ್ತೇವೆಂದು ಹೇಳಿದ್ದರು. ಈ ವಿಚಾರ ರೆಕಾರ್ಡ್‌ನಲ್ಲಿದೆ. ಏನೆ ಸಂಜೆ ಮಾನ್ಯ ಮಂಖ್ಯ ಮಂತ್ರಿಗಳು, ನಾನು ಇಲ್ಲಿ ಹೇಳಿಕೆ ಕೊಡುವುದಿಲ್ಲ ಎಂದು ಹೇಳಿದರು. ಇದರಿಂದ ಈ ಸಮಸ್ಯೆ ಉದ್ಭವವಾಗಿದೆ. ಇವರು ಪತ್ರಿಕೆಗಳಲ್ಲಿ ಹೇಳಿಕೆ ಕೊಟ್ಟಿದ್ದಾರೆ, ಕೌನ್ಸಿಲ್‌ನಲ್ಲಿ ಹೇಳಿಕೆ ಕೊಟ್ಟಿದ್ದಾರೆ. ಆದರೆ ಇಲ್ಲಿ ಹೇಳಿಕೆ ಕೊಡುವುದಿಲ್ಲ ಎಂದರೆ ಈ ಸದನವನ್ನು ನಿರ್ಲಕ್ಷ್ಯವಾಡಿದಂತಾಗುತ್ತದೆ.

ಶ್ರೀ ರಾಮಕೃಷ್ಣ ಹೆಗಡೆ.— ಅಧ್ಯಕ್ಷರೇ, ನಾನು ಪ್ರಾರಂಭದಲ್ಲಿಯೇ ಹೇಳಿದ್ದೇನೆ. ನಾನು ವಿವರವಾಗಿ ಹೇಳಿಕೆ ಕೊಡಲಿಕ್ಕೆ ಹೋಗುವುದಿಲ್ಲ, ಇದರ ಬಗ್ಗೆ ಎನ್‌ಕ್ವೈರಿ ಮಾಡಲಿಕ್ಕೆ ಸಿ.ಬಿ.ಐ.ಗೆ ತಿಳಿಸಿದ್ದೇನೆಂದು ಸಣ್ಣ ಹೇಳಿಕೆಯನ್ನು ಯಾವ ವಿಚಾರದಲ್ಲಿ ಕೊಟ್ಟೆ ಎಂದರೆ, ಕೆಲವು ವಕೀಲರು ಬಂದು ನನ್ನನ್ನ್ನು ಭೇಟಿ ಆದರು, ಅವರ ಜೊತೆ ಈ ಕೇಸಿನ ಹಿನ್ನೆಲೆ ಏನು ಇದೆ ಎಂದು ಒಂದು ಸಂಕ್ಷಿಪ್ತ ಹೇಳಿಕೆಯನ್ನು ಕೊಟ್ಟೆ ಅಷ್ಟೆ. ವಿವರವಾಗಿ ಹೇಳಿಕೆ ಕೊಡಲಿಕ್ಕೆ ಹೋಗುವುದಿಲ್ಲ. ಇದರ ಬಗ್ಗೆ ತನಿಖೆಯಾಗುತ್ತಿರುವ ಸಂದರ್ಭದಲ್ಲಿ ನಾನು ಇಲ್ಲಿ ಹೇಳಿಕೆಯನ್ನು ಕೊಡತಕ್ಕದ್ದು ಸರಿಯಾಗುವುದಿಲ್ಲ. ಈ ಮನೆಯು ಮುಂದೆ ಇವೊತ್ತು ಅತ್ಯಂತ ಮಹತ್ವದ ವಿಷಯಗಳು ಏನಿವೆ ಅವು ಚರ್ಚೆಯಾಗಬೇಕು. ಬರಗಾಲ ಪರಿಸ್ಥಿತಿಯ ಬಗ್ಗೆ ಚರ್ಚೆ ಪ್ರಾರಂಭವಾಗಿದೆ. ನಾಡಿದ್ದು ಎಲ್ಲಾ ರಾಜ್ಯಗಳ ಮುಖ್ಯ ಮಂತ್ರಿಗಳನ್ನೂ ಮಾನ್ಯ ಪ್ರಧಾನ ಮಂತ್ರಿಗಳು ಕರೆದಿದ್ದಾರೆ. ನಾನು ಡೆಲ್ಲಿಗೆ ಹೋಗಬೇಕಾಗಿದೆ. ಹೋಗುವುದಕ್ಕೆ ಮುಂಚೆ ಈ ಮನೆಯ ಮಾನ್ಯ ಸದಸ್ಯರುಗಳ ಅಭಿಪ್ರಾಯಗಳು ಏನು ಎಂಬುದನ್ನು

ತಿಳಿದುಕೊಂಡು ಹೋಗಬೇಕಾಗಿದೆ. ಇದರ ಬಗ್ಗೆ ಆಸಕ್ತಿ ತೋರಿಸುವುದನ್ನು ಬಿಟ್ಟು ಇನ್ಯಾವುದೋ ವಿಷಯದ ಬಗ್ಗೆ ನೀವು ಇಷ್ಟೊಂದು ಆಸಕ್ತಿಯನ್ನು ತೋರಿಸುತ್ತಿದ್ದೀರೋ ನನಗೆ ಗೊತ್ತಾಗುತ್ತಿಲ್ಲ. ಕೇಂದ್ರ ಸರ್ಕಾರದಲ್ಲಿರತಕ್ಕದ್ದು ಕಾಂಗ್ರೆಸ್ ಪಕ್ಷದ ಸರ್ಕಾರ. ಸಿ.ಬಿ.ಐ ಎನ್‌ಕ್ವೈರಿಯ ಒಂದು ತಟಸ್ಥವಾದ ಏಜೆನ್ಸಿಯಿಂದ ಆಗಬೇಕೆಂದು ತಾವು ಹೇಳುತ್ತಿದ್ದೀರಿ, ನಾವೂ ಹೇಳುತ್ತಿದ್ದೇವೆ. ಅದು ಯಾವರೀತಿ ಆಗುತ್ತದೆಯೋ ಗೊತ್ತಿಲ್ಲ. ಆದರೂ ನಾವು ಆದರಲ್ಲಿ ವಿಶ್ವಾಸವನ್ನಿಟ್ಟಿದ್ದೇವೆ. ಮಾನ್ಯ ಸದಸ್ಯರಲ್ಲಿ ನನ್ನ ಮನವಿ ಏನೆಂದರೆ, ಈ ವಿಚಾರವನ್ನು ಇಷ್ಟಕ್ಕೆ ಬಿಡೋಣ. ಆಭಾವ ಪರಿಸ್ಥಿತಿಯ ಬಗ್ಗೆ ನಾವು ಮಾತನಾಡೋಣ. ನಾಳೆ ಬೆಳಿಗ್ಗೆ ಸುಖ್‌ರಾಂರವರು ಬರುತ್ತಿದ್ದಾರೆ ಕೇಂದ್ರದ ಅಧಿಕಾರಿಗಳ ಒಂದು ತಂಡ ಬರುತ್ತಿದೆ. ಆದ್ದರಿಂದ ಯಾವುಯಾವುದರ ಬಗ್ಗೆ ನಾವು ಎಷ್ಟೆಷ್ಟು ಮಹತ್ವ ಮತ್ತು ಆಸಕ್ತಿಯನ್ನು ತೋರಿಸಬೇಕೋ ಬೇಡವೋ ?

ಶ್ರೀ ಎಸ್. ಬಂಗಾರಪ್ಪ..— ಮಾನ್ಯ ಅಧ್ಯಕ್ಷರೇ, ನಾನು ಹೇಳತಕ್ಕ ಒಂದು ವಿಚಾರವನ್ನು ತಾವು ಗಮನಿಸಬೇಕು. ಸರ್ಕಾರದ ಪರವಾಗಿ ಉತ್ತರವನ್ನು ಹೇಳತಕ್ಕ ಹಕ್ಕು ಮಾನ್ಯ ಮಂತ್ರಿಗಳಿಗೆ ಇದೆ. ನಾವು ಈ ಮನೆಯ ಸದಸ್ಯರಾಗಿ ನಿಯಮಾವಳಿಯ ಚೌಕಟ್ಟಿನಲ್ಲಿ ಮಾತನಾಡತಕ್ಕ ಅವಕಾಶ ನಮಗಿದೆ. ತಾವು ನಮ್ಮ ಅಭಿಪ್ರಾಯಗಳನ್ನು ತೆಗೆದುಕೊಂಡು ಆನಂತರ ಏನು ಅಂತಿಮ ತೀರ್ಮಾನವನ್ನು ತೆಗೆದುಕೊಳ್ಳುತ್ತೀರೋ ತೆಗೆದುಕೊಳ್ಳಿ. ಅದಕ್ಕೆ ನಾನು ಅಡ್ಡಿ ಬರುವುದಿಲ್ಲ. ಈ ಪ್ರಕರಣದ ಬಗ್ಗೆ ನನ್ನ ಹತ್ತಿರ ಸಲವಾರು ವಿವರಗಳಿವೆ, ಆದರೆ ಸಂಪೂರ್ಣ ವಿವರಕ್ಕೆ ನಾನು ಈಗ ಹೋಗುವುದಿಲ್ಲ. ಚರ್ಚೆಗೆ ತಾವು ಅವಕಾಶವನ್ನು ಮಾಡಿಕೊಟ್ಟರೆ ನಾನು ವಿವರಗಳನ್ನು ಕೊಡುತ್ತೇನೆ. ನಿನ್ನೆಯ ದಿವಸವೇ ನಾನು ಈ ನಿಲುವಳಿ ಸೂಚನೆಯನ್ನು ಕಳುಹಿಸಿಕೊಟ್ಟಿದ್ದೇನೆ. ಈಗ ಮತ್ತೊಂದು ನಿಲುವಳಿ ಸೂಚನೆಯನ್ನು ಕಳಂಹಿಸುವುದು ಒಳ್ಳೆಯ ಸಂಪ್ರದಾಯವಲ್ಲವೆಂದು ನಾನು ಸುಮ್ಮನಿದ್ದೇನೆ. ಈಗ ತಮ್ಮಲ್ಲಿ ನಾನು ಅನುಮತಿಯನ್ನು ಕೇಳುತ್ತಿದ್ದೇನೆ.....

ಅಧ್ಯಕ್ಷರು.— ನನ್ನ ಅನುಮತಿ ತಮಗೆ ಯಾವುದರ ಸಲುವಾಗಿ ಬೇಕು.

ಶ್ರೀ ಎಸ್. ಬಂಗಾರಪ್ಪ..— ಇದರ ಬಗ್ಗೆ .....

೧-೦೦ ಪಿ. ಎಂ.

ಅಧ್ಯಕ್ಷರು.— ಇದರ ಬಗ್ಗೆ ಎಂದರೆ ಯಾವುದರ ಬಗ್ಗೆ ? ಬರಗಾಲ ಪರಿಸ್ಥಿತಿಯ ಬಗ್ಗೆಯೆ ? ವಂಗಳೂರು ಕೆಮಿಕಲ್ಸ್ ಅಂಡ್ ಫರ್ಟಿಲೈಸರ್ಸ್ ಕಾರ್ಖಾನೆ ಬಗ್ಗೆಯೇ ? ಅಥವಾ.....

ಶ್ರೀ ಎಸ್. ಬಂಗಾರಪ್ಪ.— ಸಿ.ಬಿ.ಐ. ಎನ್‌ಕ್ವೈರಿ ಬಗ್ಗೆ ಅವರು ಹೇಳಿದ್ದಾರೆ.....

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.— ಬರಗಾಲದ ಪರಿಸ್ಥಿತಿಯ ಬಗ್ಗೆ ಚರ್ಚೆಮಾಡಿ ಮುಗಿಸಬೇಕೆಂದು ನಾವು ಪ್ರಸ್ತಾಪ ಮಾಡಿದ್ದೇವೆ. ಆದರೆ ಈಗ ನಮ್ಮ ವಂದಿರತಕ್ಕ ವಿಚಾರ ಎಂದರೆ ಪತ್ರಿಕೆಗಳಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಹೇಳಿರತಕ್ಕ ೨ ವಿಚಾರಗಳಿವೆ. ಇದರಲ್ಲಿ ರಾಜಕೀಯ ಕೈವಾಡ ಇದೆ. ಇದರ ಬಗ್ಗೆ ಇನ್‌ವೆಸ್ಟಿಗೇಟ್.....

(ಗೊಂದಲ)

ಅಧ್ಯಕ್ಷರು.— ನಿಯಮ ೩೫ಳಿರ ಕೆಳಗೆ ತಾವು ಕೊಟ್ಟಿದ್ದೀರಿ. ಅದರ ಬಗ್ಗೆ ನಾವು ನಮ್ಮ ತೀರ್ಮಾನವನ್ನು ಕೊಟ್ಟಿದ್ದೇವೆ. ಈಗ ಈ ಅಡ್ಜರ್ನ್‌ಮೆಂಟ್ ಮೋಷನ್ ಕೊಟ್ಟಿದ್ದು ಇದರ ಬಗ್ಗೆ ಚರ್ಚೆ ಮಾಡಬೇಕೆಂದರೆ ಇದಕ್ಕೆ ನಾನು ಅವಕಾಶವನ್ನು ಕೊಡುವುದಿಲ್ಲ. ಇಪ್ಪತ್ತಿಗೆ ಈಗಾಗಲೇ ಒಂದು ಅಡ್ಜರ್ನ್‌ಮೆಂಟ್ ಮೋಷನ್ ಬಗ್ಗೆ ಚರ್ಚೆ ಮಾಡಲು ಅವಕಾಶವನ್ನು ಕೊಟ್ಟಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.— ನಾನು ಮೊದಲೇ ಹೇಳಿದ್ದೇನೆ. ನಾವು ಅಡ್ಜರ್ನ್‌ಮೆಂಟ್ ಮೋಷನ್‌ನ್ನು ಪ್ರೆಸ್ ಮಾಡುವುದಿಲ್ಲ.....

(ಗೊಂದಲ)

(ಸುಮಾರು ೮-೧೦ ಜನ ಮಾನ್ಯ ಸದಸ್ಯರು ಒಟ್ಟಿಗೇ ನಿಂತು ಮಾತನಾಡಲು ಪ್ರಾರಂಭಿಸಿದರು)

ಅಧ್ಯಕ್ಷರು.— ಇಷ್ಟೊಂದು ಜನ ಎಲ್ಲರೂ ಒಟ್ಟಿಗೇ ಎದ್ದುನಿಂತು ಮಾತನಾಡುವುದಾದರೆ ನಾನು ಯಾರಿಗೂ ಅವಕಾಶವನ್ನು ಕೊಡುವುದಿಲ್ಲ. ಬರಗಾಲ ಪರಿಸ್ಥಿತಿಯ ಬಗ್ಗೆ ಮಾತ್ರ ಮಾತನಾಡಲು ಅವಕಾಶವನ್ನು ಕೊಡುತ್ತೇನೆ.

(ಸುಮಾರು ೮-೧೦ ಜನ ಮಾನ್ಯ ಸದಸ್ಯರು ಒಟ್ಟಿಗೇ ಎದ್ದುನಿಂತು ಮಾತನಾಡುತ್ತಿದ್ದರು)

ಶ್ರೀ ವೇದಾಂತ ಹೆಬ್ಬಿಗೆ.— ಮಾನ್ಯ ಅಧ್ಯಕ್ಷರೆ, ನನ್ನದೊಂದು ಪಾಯಿಂಟ್ ಆಫ್ ಆರ್ಡರ್ ಇದೆ.

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರಿಗೆ ಹೇಳುವುದೇನೆಂದರೆ, ೧ ಮತ್ತು ಈ ಚರ್ಚೆಗೆ ಅವಕಾಶ ವಿಲ್ಲ. ರಷೀದ್ ಬಗ್ಗೆ ಚರ್ಚೆ ನಡೆಸಲಂ ನಾಳೆ ಅವಕಾಶ ಕೊಡಬೇಕೆನ್ನುವುದರ ಬಗ್ಗೆ ವಿಚಾರ ಮಾಡೋಣ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.— ಮಾನ್ಯ ಅಧ್ಯಕ್ಷರೇ, ಈ ವಿಚಾರ ಚರ್ಚೆಗೆ ಬರುತ್ತಲೇ ಇರಲಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಇಲ್ಲಿ ಸ್ಟೇಟ್‌ಮೆಂಟ್ ಮಾಡದೆ ಔಟ್ ಆಫ್ ಸ್ಟೇಷನ್ ಸ್ಟೇಟ್ ಮೆಂಟ್ ಮಾಡಿರುತ್ತಾರೆ. ಪ್ರೆಸ್ ಸ್ಟೇಟ್‌ಮೆಂಟ್ ಮಾಡಿದ್ದಾರೆ. ''A reporter asked' have you checked up this information with persons other than the Home Minister''

SRI M. RAGHUPATHY.— In this House itself he has made this statement. He has made this staiement yesterday.

(*Interruptions*)

SMT. K. S. NAGARATHANAMMA.—'A reporter asked' have checked up this information with persons other than the Home Minister ?

SRI M. RAGHUPATHY.— Point of order.

SMT. K. S. NAGARATHANAMMA.—I have stood on a point of order,

(*Interruptions*)

ಅಧ್ಯಕ್ಷರೆ.—ಮಾನ್ಯ ಸದಸ್ಯರಾದ ರಘುಪತಿಯವರು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆ. ಅವರು ಹೇಳಲಿ.

ಶ್ರೀ ಎಂ. ರಘುಪತಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧಪಕ್ಷದ ನಾಯಕರು ನಿನ್ನೆ ಮುಂಗಿದು ಹೋದ ವಿಚಾರದ ಬಗ್ಗೆ ಪ್ರಸ್ತಾಪ ಮಾಡಲು ಯಾವ ರೂಲ್ಸ್ ಪ್ರಕಾರ ಎತ್ತಿದ್ದಾರೆ. ರೂಲ್ಸ್ ೩೧೦ರ ಪ್ರಕಾರವಾಗಿಯಾಗಲಿ, ನೋಟೀಸ್ ಬಂದಿದೆಯೇ ? ನಿನ್ನೆ ಮುಂಗಿದುಹೋದ ವಿಚಾರವನ್ನು ಎತ್ತ ಬೇಕಾದರೆ ಈವೊತ್ತು ನೋಟೀಸನ್ನು ಕೊಟ್ಟಿದ್ದಾರೆಯೇ ? ಅವರು ಯಾವುದೇ ನೋಟೀಸ್ ಕೊಡದೆ ಎದ್ದುನಿಂತು ಕೇಳುವುದಕ್ಕೆ ಯಾವುದೇ ನಿಯಮಗಳು ಇಲ್ಲವೆ ? ಬೇಕಾದರೆ ಅವರು ಪ್ರಿವಿಲೇಜ್ ಮೂವ್ ಮಾಡಲಿ ಡಿಸ್‌ಕಸ್ ಮಾಡೋಣ. ಡಿಸ್‌ಕಸ್ ಮಾಡಲಿಕ್ಕೆ ಯಾರೂ ಹೆದರಿಕೊಳ್ಳುವುದಿಲ್ಲ.

(ಗೊಂದಲ)

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.— ಮಾನ್ಯ ಸದಸ್ಯರು ಏನು ಹೇಳಿದರು.

ಅಧ್ಯಕ್ಷರು.— ಪ್ರಿವಿಲೇಜ್ ಬೇಕಾದರೆ ತನ್ನಿ ಎಂದು ಹೇಳಿದರು.

(ಭಾರೀ ಗೊಂದಲ)

ಅಧ್ಯಕ್ಷರು.— ಕ್ರಿಯಾಲೋಪಕ್ಕೆ ರೂಲಿಂಗ್ ಕೊಡಬೇಕೇ ಬೇಡವೆ ?

(ಗೊಂದಲ)

ಅಧ್ಯಕ್ಷರು.— ದಯವಿಟ್ಟು ತಾವೆಲ್ಲರೂ ಕುಳಿತುಕೊಳ್ಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ನಾವು ಇದರ ಬಗ್ಗೆ ಬರೆದುಕೊಟ್ಟರೂ ಸಮರ್ಪಕವಾದ ಉತ್ತರ ಬರಲಿಲ್ಲ ಕೊಲೆ ಪ್ರಕರಣದಲ್ಲಿ ವಿವರವಾದ ಮಾಹಿತಿ ಸಿಗಲಿಲ್ಲ. ಆದ್ದರಿಂದ ದಯವಿಟ್ಟು ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಿ ಎಂದು ೭–೮ ಜನ ಸಹಿ ಮಾಡಿಕೊಟ್ಟಿದ್ದೇವೆ. ತಾವು ಕೊಟ್ಟಿಲ್ಲವೆಂದು ಹೇಳಲಾಗುವುದು ಸರಿಯಿಲ್ಲ. ಅದನ್ನು ಒಪ್ಪುವುದು ಬಿಡುವುದು ಬೇರೆ ವಿಷಯ.

ಅಧ್ಯಕ್ಷರು.— ಕ್ರಿಯಾಲೋಪದ ಬಗ್ಗೆ ತೀರ್ಮ ಕೊಡುತ್ತೇನೆ, ಕುಳಿತುಕೊಳ್ಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಎಫ್.ಐ.ಆರ್. ಇದೆ. ೧೭ರಂದು ಅವರು ಬೆಂಗಳೂರಿನಲ್ಲಿ ಇದ್ದರು ಎಂಬುದಕ್ಕೆ ಪುರಾವೆ ಇದೆ.

ಅಧ್ಯಕ್ಷರು.— ಈ ರೀತಿ ನೀವು ಮಾತನಾಡುತ್ತಿದ್ದರೆ ರೆಕಾರ್ಡ್ ಮಾಡಬೇಡಿ ಎಂದು ಹೇಳಬೇಕಾಗುತ್ತದೆ. ನಾನು ರೂಲಿಂಗ್ ಕೊಡುವವರೆಗೆ ತಾವು ಕೂಡಬೇಕು.

(ಗೊಂದಲ)

ಅಧ್ಯಕ್ಷರು.— ನೀವು ಮಾತನಾಡುವುದು ಯಾವುದೂ ರೆಕಾರ್ಡ್ ಆಗುವುದಿಲ್ಲ, ನಾನು ರೂಲಿಂಗ್ ಕೊಡುತ್ತೇನೆ ತಾವು ಕುಳಿತುಕೊಳ್ಳಿ.

ಶ್ರೀ ಎಂ. ಎಸ್. ಕೃಷ್ಣನ್.— ಕ್ರಿಯಾಲೋಪಕ್ಕೆ ರೂಲಿಂಗ್ ಕೊಡುವುದಕ್ಕೆ ಮುಂಚೆ ನಾವು ಹೇಳಂಥ ವಿಷಯವನ್ನು ಕೇಳಬೇಕೆಂದು ಕೇಳಿಕೊಳ್ಳುತ್ತೇನೆ. ಮಾನ್ಯ ಮುಖ್ಯ ಮಂತ್ರಿಗಳು ನಿನ್ನೆಯ ದಿವಸ ರಶೀದ್ ವಿಷಯದಲ್ಲಿ ಕೆಲವು ಮಾತುಗಳನ್ನು ಹೇಳಿದ್ದುದು ನಿಜ. ಆದರೆ ಪತ್ರಿಕೆಯಲ್ಲಿ ಬಂದಿರುವುದಕ್ಕೂ, ಅಲ್ಲಿ ನಡೆದದ್ದಕ್ಕೂ ಮತ್ತು ಇಲ್ಲಿ ಹೇಳಿದ್ದಕ್ಕೂ ಬಹಳ ವ್ಯತ್ಯಾಸ ಇದೆ. ಅಲ್ಲಿ ಹೇಳಿದ್ದನ್ನು ಇಲ್ಲಿ ಹೇಳಲಿಲ್ಲ. ಅದೆಲ್ಲ ಪತ್ರಿಕೆಯಲ್ಲಿ ಬಂದಿದೆ. ನಮಗೂ ವಿಷಯ ತಿಳಿದುಕೊಳ್ಳಬೇಕೆಂದು ಆಸೆ. ನಿಜಾಂಶವನ್ನು ತಿಳಿದುಕೊಳ್ಳಬೇಕಾಗಿದೆ. ಅವರು ಹರ್ಷ್ ಮಾಡುವುದಿಲ್ಲವೆಂದು ಹೇಳಿದರು. ಅಲ್ಲದೆ. ಸಿ.ಬಿ.ಐ. ತನಿಖೆಗೆ ಕಳುಹಿಸುತ್ತೇನೆಂದು ಹೇಳಿದರು. ಸಿ.ಬಿ.ಐ.ಗೆ ಕಳುಹಿಸುವ ಕಾರ್ಯಕ್ರಮವನ್ನು ಅವರು ತೆಗೆದುಕೊಂಡಿದ್ದಾರೆ. ಅದು ಸ್ವಾಗತಾರ್ಹವಾದ ಕಾರ್ಯಕ್ರಮ. ಇನ್ನೂ ಅನೇಕ ಅಂಶಗಳು ತಿಳಿದುಬಂದಿರುವುದಾಗಿ ಪತ್ರಿಕೆಗಳಲ್ಲಿ ಹೇಳಿಕೆಗಳನ್ನು ಕೊಟ್ಟಿದ್ದಾರೆ, ಲೇಖನಗಳನ್ನು ಬರೆದಿದ್ದಾರೆ. ಅವೆಲ್ಲವನ್ನೂ ನೋಡಿದರೆ ಅದರ ಬಗ್ಗೆ ನಿಜವಾಗಿ ಎಲ್ಲರಿಗೂ ಅನುಮಾನ ಬರುತ್ತದೆ. ಆದ್ದರಿಂದ ಸ್ಪಷ್ಟವಾಗಿ ಅನುಮಾನ ಹೋಗುವಂಥ ಹೇಳಿಕೆ ಕೊಟ್ಟರೆ ಸಮಂಜಸವಾಗುತ್ತದೆ. ಆ ರೀತಿ ಹೇಳಿಕೆ ಕೊಡುವುದಕ್ಕೆ ತಾವು ಮಾನ್ಯ ಮುಖ್ಯ ಮಂತ್ರಿಗಳಿಗೆ ಅನುವು ಮಾಡಿಕೊಡಬೇಕು. ಅದು ಆಗುವುದಿಲ್ಲವೆಂದರೆ ನಾವು ಏನೂ ಮಾಡುವುದಕ್ಕಾಗುವುದಿಲ್ಲ.

(ಶ್ರೀಮತಿ ಕೆ. ಎಸ್. ನಾಗರತ್ನಮ್ಮನವರು ಮಾತನಾಡಲು ಎದ್ದು ನಿಂತರು)

ಅಧ್ಯಕ್ಷರು.— ನಾನು ರೂಲಿಂಗ್ ಕೊಡಬೇಕೇ ಬೇಡವೇ ನಾಗರತ್ನಮ್ಮನವರೆ ? ನೀವು ಏನಾದರೂ ಹೇಳಬೇಕಾದರೆ ರೂಲ್ಸ್ ಪ್ರಕಾರ ಅಡ್ಜರ್ನ್‌ಮೆಂಟ್ ಮೋಷನ್ ನೋಟೀಸ್ ಆದರೂ ಕೊಡಿ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.— ನಾವು ಬರೆದುಕೊಟ್ಟಿದ್ದೇವೆ, ಈ ವಿಚಾರದಲ್ಲಿ ಮಾತನಾಡುತ್ತೇವೆ ಎಂದು.

ಅಧ್ಯಕ್ಷರು.— ಅದು ಆಗುವುದಿಲ್ಲ ? ದಯವಿಟ್ಟು ಕುಳಿತುಕೊಳ್ಳಿ. ಇಲ್ಲದಿದ್ದರೆ ರೆಕಾರ್ಡ್ ಮಾಡಬೇಡಿ ಎಂದು ಹೇಳಬೇಕಾಗುತ್ತದೆ. ಹಿರಿಯ ಸದಸ್ಯರಾಗಿ ನೀವು ಹೀಗೆ ಮಾತನಾಡಿದರೆ ಹೇಗೆ ? ನಾನು ಈಗ ರೂಲಿಂಗ್ ಕೊಡುತ್ತೇನೆ. ಅವರು ಏನು ಕ್ರಿಯಾಲೋಪವನ್ನು ಎತ್ತಿದ್ದಾರೆ ಅದಕ್ಕೆ ರೂಲಿಂಗ್ ಕೊಡಬೇಕಾಗಿದೆ.

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ — ಮಾನ್ಯ ಅಧ್ಯಕ್ಷರೆ, ವಿರೋಧ ಪಕ್ಷದ ನಾಯಕರು ಎರಡು ಅಂಶಗಳನ್ನು ಎತ್ತಿದ್ದಾರೆ, ನಿನ್ನೆ ನಾನು ಕೊಟ್ಟಂತಹ ಹೇಳಿಕೆ ಅವರಿಗೆ ತೃಪ್ತಿಕರವಾಗಿಲ್ಲ ಅಥವಾ ಅಪೂರ್ಣವಾಗಿತ್ತು ಎಂದು.

ಎರಡನೆಯದು, ಇಲ್ಲಿ ನಾನು ಹೇಳಿಕೆಯನ್ನು ಕೊಡದೆ ಹೊರಗಡೆ ಕೊಟ್ಟಿದ್ದೇನೆ ಕೆಲವು ವಿಚಾರ ಇಲ್ಲಿ ಹೇಳದಿದ್ದುದನ್ನು ಹೊರಗಡೆ ಹೇಳಿದ್ದೇನೆ ಎಂದು ಹೇಳಿದ್ದಾರೆ. ಪತ್ರಿಕಾಕರ್ತರೊಡನೆ ಮಾತನಾಡುವಾಗ ಹೊರಗಡೆ ಹೋಗಿದ್ದೆ. ವಕೀಲರು ಬಂದಮೇಲೆ ಅವರು ನನ್ನನ್ನು ಭೇಟಿಯಾದರು. ಇಲ್ಲಿ ಹೇಳಿಕೆ ಕೊಟ್ಟಮೇಲೆ ಪತ್ರಿಕಾಕರ್ತರನ್ನು ಭೇಟಿಯಾಗಲಿಲ್ಲ. ಎರಡನೆಯ ವಿಚಾರ, ಪತ್ರಿಕೆಗಳಿಗೆ ಹೇಳಿದ್ದುದು ಬೇರೆ, ಇಲ್ಲಿ ಹೇಳಿದ್ದುದು ಬೇರೆ ಅಥವಾ ಇಲ್ಲಿ ಹೇಳಿದ್ದಕ್ಕಿಂತ ಹೆಚ್ಚು ಅಲ್ಲಿ ಹೇಳಿದ್ದೇನೆ ಎನ್ನುವುದು.

ಮಾನ್ಯ ವಿರೋಧ ಪಕ್ಷದ ಸದಸ್ಯರೊಬ್ಬರು.—ಇಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಇಲ್ಲ ಎಂದರೆ, ಹೇಳುತ್ತೇನೆ. ನಿಮಗೆ ಅಷ್ಟು ಸಹಿಸಲಾಗುತ್ತಿಲ್ಲ, ನಿಮ್ಮ ಇಂಟರೆಸ್ಟ್ ಏನಿದೆ ಎಂಬುದೂ ನನಗೆ ಗೊತ್ತಿಲ್ಲ. ನಿಮ್ಮ ಪಕ್ಷದ್ದು.....

(ಹಲವಾರು ವಿರೋಧ ಪಕ್ಷದ ಸದಸ್ಯರು ಒಟ್ಟಿಗೆ ಎದ್ದುನಿಂತು ಪ್ರತಿಭಟಿಸತೊಡಗಿದರು)

(ಗೊಂದಲ)

ಅಧ್ಯಕ್ಷರು.—ಅವರು ಹೇಳುತ್ತಾರೆ ಕುಳಿತುಕೊಳ್ಳಿ, ಏನು ಹೇಳುತ್ತಾರೆ ನೋಡೋಣ.

(ಗೊಂದಲ)

ಅಧ್ಯಕ್ಷರು.—ದಯವಿಟ್ಟು ಸ್ವಲ್ಪ ಕೇಳಿ. ಕೇಳುವುದಕ್ಕೂ ಇಷ್ಟವಿಲ್ಲವೇ ?

ಶ್ರೀ ಜಿ. ನಾರಾಯಣ ಕುಮಾರ್.—ಕಾಂಗ್ರೆಸ್ಸಿನವರು ಏನು ಮಾಡಿದರೂ.....

(ಗೊಂದಲ)

ಶ್ರೀ ಎಂ. ರಘುಪತಿ,—ಕುಂಬಳಕಾಯಿ ಕಳ್ಳ ಎಂದರೆ ಹೆಗಲು ಏತಕ್ಕೆ ಮುಟ್ಟಿ ನೋಡಿ ಕೊಳ್ಳಬೇಕು ?

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ನೀವು ಮುಟ್ಟಿ ನೋಡಿಕೊಳ್ಳಬೇಕು.

ಅಧ್ಯಕ್ಷರು.— ಶ್ರೀಮತಿ ನಾಗರತ್ನಮ್ಮನವರೇ, ಅವರು ಹೇಳುವುದನ್ನು ಕೇಳಬೇಕೋ ಬೇಡವೋ?

ಶ್ರೀ ರಾಮಕೃಷ್ಣ ಹೆಗಡೆ.—ಇಲ್ಲಿ ಈಗ .....

ಶ್ರೀ ಎಸ್. ಬಂಗಾರಪ್ಪ.—ಏನೇ ಉತ್ತರ ಕೊಡಿ. ಸುಮ್ಮ ಸುಮ್ಮನೆ ಮೈ ಪರಚಿಕೊಳ್ಳಬೇಡಿ. ಯಾರೂ ಸಿಗಲಿಲ್ಲ ಎಂದು ನಿಮ್ಮ ಮೈ ಪರಚಿಕೊಳ್ಳುವುದಕ್ಕೆ ಹೋಗಬೇಡಿ. ಪಕ್ಷದ ಇಂಟರೆಸ್ಟ್ ಏತಕ್ಕೆ ಬೇಕು ? ನೇರವಾಗಿ ಎಂದು ಮಾತನ್ನು ತೂಕವಾಗಿ ಹೇಳಿ, ಸಾಕು. ಏತಕ್ಕೆ ಏನೇನೋ ವಹಾತನಾಡುತ್ತೀರಿ ?

ಅಧ್ಯಕ್ಷರು.— ದಯವಿಟ್ಟು ತಾವು ಕುಳಿತುಕೊಂಡು ಕೇಳಿ.

ಶ್ರೀ ಎಸ್. ಬಂಗಾರಪ್ಪ.—ಏನು ಹೇಳೋದು, ನಾವು ಇಲ್ಲಿ ಕುಳಿತುಕೊಂಡು ಅವರು ಏನು ಹೇಳಿದರೂ ಕೇಳಬೇಕೇ ?

ಶ್ರೀ ಜಿ. ನಾರಾಯಣಕುಮಾರ್.—ಬಂಗಾರಪ್ಪನವರದು ಸ್ವಜಾತಿ ವೈರತ್ವ. ಇಲ್ಲಿ ಏತಕೆ ಸ್ವಜಾತಿ ವೈರತ್ವ ?

(ಗೊಂದಲ)

ಶ್ರೀ ಗೋಪಾಲ ಮಂಡಕುಂದ ಕಾನಡೆ.—ಏನು ಕೂಡ್ರಿ ಕೂಡ್ರಿ ಎಂದು ಹೇಳುತ್ತೀರಿ. ಅವರಿಗೆ ಹೇಳಿ. ** ಆ ಕಡೆ ಇಟ್ಟುಕೊಂಡು.....

ಅಧ್ಯಕ್ಷರು.—ಮಾನ್ಯ ಮುಖ್ಯ ಮಂತ್ರಿಗಳ ಹೇಳಿಕೆ ಬೇಕೋ ಬೇಡವೋ ? ಹಾಗಾದರೆ ನಿಮಗೆ ಹೇಳಿಕೆ ಬೇಡವೆ ?

ಶ್ರೀ ಗೋಪಾಲ ಮಂಡಕುಂದ ಕಾನಡೆ.—ಕೂಡ್ರಿ ಕೂಡ್ರಿ ಎಂದು ಹೇಳುತ್ತೀರಿ. ಅವರಿಗೆ ಏತಕ್ಕೆ ತಾವು ಹೇಳುವುದಿಲ್ಲ ?

ಅಧ್ಯಕ್ಷರು.—ಆಯಿತು ಕುಳಿತುಕೊಳ್ಳಿ. ಅವರು ಹೇಳುವುದು ಬೇಕಿಲ್ಲವೇ ನಿಮಗೆ ?

(ಮತ್ತೆ ಕೆಲವು ಸದಸ್ಯರು ಮಾತನಾಡುತ್ತಿದ್ದರು)

MR. SPEAKER - Nothing will go on record. ** ನಿಮಗೆಲ್ಲಾ ಅವಕಾಶ ಮಾಡಿಕೊಟ್ಟಿದ್ದೇ ತಪ್ಪು ಎಂದು ಕಾಣುತ್ತದೆ. ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು.—ಏನೂ ರೆಕಾರ್ಡ್‌ಗೆ ಹೋಗುವುದಿಲ್ಲ. Nothing will go on record.

ಶ್ರೀ ಬಿ. ಲಕ್ಕಪ್ಪ.—** ಇಟ್ಟಿದ್ದೀರಿ ಅಲ್ಲಿ. ಎಲ್ಲರನ್ನು ಒಂದೇ ದೃಷ್ಟಿಯಲ್ಲಿ ನೋಡಿ.

ಶ್ರೀ ಎಸ್. ಬಂಗಾರಪ್ಪ.—ಅವರ ಕಡೆ ವಿಪ್ ಹೋಗಿ ಕೂರಿಸಿ ಬಂದರು.

ಅಧ್ಯಕ್ಷರು.—ಮಾನ್ಯ ಮುಖ್ಯ ಮಂತ್ರಿಗಳು ಎದ್ದು ನಿಂತಿದ್ದಾರೆ. ಏನೋ ಹೇಳಬೇಕೆಂದು ನಿಂತಿದ್ದಾರೆ, ಹೇಳಲಿ.

(ಗೊಂದಲ)

ಅಧ್ಯಕ್ಷರು.—ಎಲ್ಲರೂ ಕೂಡಿ.

ಶ್ರೀ ಎಂ. ಎಸ್. ಕೃಷ್ಣನ್.—ಒಂದು ಮಾತು, ನಾನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುವುದೇನೆಂದರೇ' ಮಾನ್ಯ ಕಾನಡೆಯವರು ಮಾತನಾಡುವಾಗ ಅವರು ಬಳಸಿದಂತಹ ಒಂದು ಶಬ್ದ ನನಗೆ ಕೇಳಿಸಿತು...

ಶ್ರೀ ಎಸ್. ಬಂಗಾರಪ್ಪ.—ಹೌದಾದು, ನಿಮಗೆ ಕೇಳಿಸಂತ್ತದೆ. ಬೇರೆಯವರು ಹೇಳಿದ್ದುದು ಕೇಳಿಸುವುದಿಲ್ಲ. ಯಾಪ ಶಬ್ದ ನಿಮಗೆ ಕೇಳಿಸಿದ್ದುದು ? ಬೇರೆಯವರು ಹೇಳಿದಂತಹ ಶಬ್ದ ಕೇಳಿಸಲಿಲ್ಲವೇ ?

ಅಧ್ಯಕ್ಷರು.—ಏನ್ರಿ ಪಾಟೀಲರೆ, ಕಾರ್ಯಕಲಾಪವನ್ನು ನಡೆಸುವುದಕ್ಕೆ ಬಂದಿದ್ದೀರೋ ಅಥವಾ ಸುಮ್ಮನೆ ಈ ರೀತಿ ಗಲಾಟೆ ಮಾಡುವುದಕ್ಕೆ ಬಂದಿದ್ದಿರೋ...

(ಗೊಂದಲ)

ಅಧ್ಯಕ್ಷರು.—ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಎಂ. ಎಸ್. ಕೃಷ್ಣನ್.—ಒಬ್ಬ ಸದಸ್ಯರನ್ನುದ್ದೇಶಿಸಿ ಇನ್ನೊಬ್ಬ ಸದಸ್ಯರು ** ಎಹ್ನುವುದು ಸರಿಯೇ ? ಆ ರೀತಿ ಹೇಳುವುದು ಸರಿಯಲ್ಲ.

(ಗೊಂದಲ)

ಅಧ್ಯಕ್ಷರು.—ಕೋಡಂಗಿ ಎಂಬ ಪದವನ್ನು ಬಳಸಿದ್ದರೆ ಅದನ್ನು ಎಕ್ಸ್‌ಪಂಜ್ ಮಾಡುತ್ತೇನೆ. Nothing will go on record.

(ಗೊಂದಲ)

ಅಧ್ಯಕ್ಷರು.—ಒಳ್ಳೆಯದಲ್ಲದ್ದು ಏನಾದರೂ ಇದ್ದರೆ, ಅದನ್ನು ರೆಕಾರ್ಡಿನಿಂದ ತೆಗೆಸುತ್ತೇನೆ.....

(ಗೊಂದಲ)

ಸಭೆ ನಡೆಸಬೇಕೊ ಬೇಡವೋ.. ಬರಗಾಲದ ಬಗ್ಗೆ ಚರ್ಚೆ ಮಾಡುವುದಕ್ಕೆ ಬಂದಿದ್ದೀರೋ ಅಥವಾ.....ಏನ್ರಿ ಇದು.....

(ಗೊಂದಲ)

ಶ್ರೀ ಎಂ. ಎಸ್. ಕೃಷ್ಣನ್.—ಅವರು ಹೇಳಿದ್ದೂ ಸರಿಯಲ್ಲ. ಇವರು ಹೇಳಿದ್ದೂ ಸರಿಯಲ್ಲ.

** ಅಧ್ಯಕ್ಷರ ಆದೇಶದ ಮೇರೆಗೆ ಭಾಗವನ್ನು ತೆಗೆದು ಹಾಕಲಾಗಿದೆ.

ಶ್ರೀ ಎಸ್. ಬಂಗಾರಪ್ಪ.—ಅದನ್ನು ಮೊದಲೇ ಹೇಳಬೇಕಾಗಿತ್ತು. ಮಾನ್ಯ ಕಾನಡೆಯವರು ಹೇಳಿದ್ದು ಕೇಳಿಸಿತು ಎಂದು ಹೇಳಿ ಇನ್ನೂ ಸ್ವಲ್ಪ ಬೆಂಕಿ ಹಚ್ಚುತ್ತಿರಾ ?

ಶ್ರೀ ಎಂ. ಎಸ್. ಕೃಷ್ಣನ್.—ನೀವು ಹೇಳಿದ್ದೂ ಸರಿಯಲ್ಲ.

MR. SPEAKER.—Nothing will go on record. ಆಡಬಾರದ ಶಬ್ದವನ್ನು ಯಾರಾದರೂ ಆಡಿದ್ದರೆ ಅದನ್ನು ಎಕ್ಸ್‌ಪಂಜ್ ಮಾಡುತ್ತೇನೆ. ಎಲ್ಲರೂ ಕೂಡಿ,

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ನವಂಗೆಲ್ಲಾ ಗೊತ್ತಿದೆ. ಈ ರೀತಿ ಗಲಾಟೆ ಮಾಡಿ ವಿಷಯವನ್ನು ಡೈವರ್ಟ್ ಮಾಡಂತ್ತೀರಾ ?

(ಗೊಂದಲ)

ಶ್ರೀ ಎಂ. ಎಸ್. ಕೃಷ್ಣನ್.—ನವಂಗೆಲ್ಲಾ ಗೊತ್ತಿದೆ. ..

ಅಧ್ಯಕ್ಷರು.—ಆಡಬಾರದ ಮಾತನ್ನು ಈ ಕಡೆಯವರಾಗಲಿ, ಆ ಕಡೆಯವರಾಗಲಿ ಆಡಿದ್ದರೆ ಅದನ್ನು ಎಕ್ಸ್‌ಪಂಜ್ ಮಾಡುತ್ತೇನೆ. ಈಗ ಮಾನ್ಯ ಮಂತ್ರಿಗಳು ವಿಷಯವನ್ನು ಹೇಳುತ್ತಾರೆ, ಅದನ್ನು ಕೇಳಿ.

(ಗೊಂದಲ)

ಅಧ್ಯಕ್ಷರು.—ಮಂಖ್ಯಮಂತ್ರಿಗಳು ಹೇಳಿದ ಮೇಲೆ ನಾನು ನನ್ನ ರೂಲಿಂಗನ್ನು ಕೊಡುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ವಿರೋಧಪಕ್ಷದ ನಾಯಕರು ಎತ್ತಿದಂತಹ ಎರಡು ಪಾಯಿಂಟ್‌ಗಳ ಬಗ್ಗೆ ನಾನು ಪ್ರಸ್ತಾಪ ಮಾಡುತ್ತಿದ್ದೆ. ನಿನ್ನೆಯ ಹೇಳಿಕೆ ಮಂತ್ರಿ ಇಲ್ಲಿ ನಾನು ಕೊಟ್ಟ ಹೇಳಿಕೆಯಲ್ಲಿ ಯಾವುದೇ ರೀತಿಯ ಕಾಂಟ್ರಡಿಟೀವ್ ಡಿಫರೆನ್ಸ್ ಇಲ್ಲ. ಈ ವಿಚಾರದಲ್ಲಿ ಇನ್ನೂ ಅನೇಕ ವಿಷಯಗಳು ನನಗೆ ಗೊತ್ತುಂಟು. ಯಾರ್ಯಾರು ಇದರಲ್ಲಿ ಇನ್ವಾಲ್ವ್ ಆಗಿದ್ದಾರೆ ಎಂಬುದೂ ಗೊತ್ತುಂಟಿ. ಆದರೆ ಹೇಳುವುದಿಲ್ಲ, ನಿನ್ನೆ ನಾನು ಈ ಸದನದಲ್ಲಿ ಏನು ಹೇಳಿದ್ದೇನೆ ಎಂಬುದನ್ನು ತಾವು ರೆಕಾರ್ಡ್ಸ್ ತೆಗೆಸಿ ನೋಡಬಹುದು. ಈ ವಿಚಾರದಲ್ಲಿ ಮೇಲ್ನೋಟಕ್ಕೆ ಕಣ್ಣಿಗೆ ಕಾಣದೇ ಇರತಕ್ಕ ಅನೇಕ ವಿಚಾರಗಳು ಇವೆ. ನಿಗೂಢತೆ ಇದೆ. ಆದ್ದರಿಂದ ಆ ವಿಚಾರಕ್ಕೆ ನಾನು ಹೋಗುವುದಿಲ್ಲವೆಂದು ಹೇಳಿದೆ.

ಶ್ರೀ ಆರ್. ವೆಂಕಟರಾಮಯ್ಯ.—ಅದನ್ನು ಹೇಳಿಬಿಡಬೇಕಾಗಿತ್ತು.

ಶ್ರೀ ಜಿ. ನಾರಾಯಣಕುಮಾರ್.—ಹೇಳೋತನಕ ಕೇಳಿ.

(ಗೊಂದಲ)

ಅಧ್ಯಕ್ಷರು.—ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಮಾನ್ಯ ಮಂಖ್ಯ ಮಂತ್ರಿಯವರು ಏನು ಹೇಳುತ್ತಾರೋ ಅದನ್ನು ಕೇಳಿ. ಏನಾದರೂ ಹೇಳಬಾರದ್ದನ್ನು ಸದಸ್ಯರು ಹೇಳಿದ್ದರೆ ಅದನ್ನು ಎಕ್ಸ್‌ಪಂಜ್ ಮಾಡಿಸುತ್ತೇನೆ.

ಶ್ರೀ ರಾಮಕೃಷ್ಣ ಹೆಗ್ಡೆ.—ಈಗ ನವಂಗೆ ಗೊತ್ತಿರತಕ್ಕ ಎಲ್ಲಾ ವಿಚಾರಗಳನ್ನು ಹೇಳಿದರೆ ನಾಳೆ ಸಿ.ಬಿ.ಐ. ಎನ್‌ಕ್ವೈರಿ ಆಗತಕ್ಕ ಕಾಲದಲ್ಲಿ ಅವರಿಗೆ ತ್ರಾಸ ಆಗತಕ್ಕ ಪ್ರಸಂಗ ಬರುತ್ತದೆ. ಆದ್ದರಿಂದ ಇದಂ ಎನ್‌ಕ್ವೈರಿಗೆ ಹೆಲ್ಪ್‌ಫುಲ್ ಆಗುವುದಿಲ್ಲ ಎನ್ನುವ ಒಂದು ಸಂದೇಹದಿಂದ ನಾನು ಹೇಳುವುದಿಲ್ಲ. ಮಾನ್ಯ ಖಾರ್ಗೆಯವರು ಓದಿದ ಪತ್ರ ಏನಿದೆ ಅದರ ಡ್ರಾಫ್ಟ್ ಯಾರು ಮಾಡಿದರು, ಎಲ್ಲಿ ಟೈಪ್ ಆಗಿದೆ ಎಂದು ನನಗೆ ಗೊತ್ತಿದೆ. ಅದನ್ನು ನಾನು ಹೇಳಲೇ ?

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಹೇಳಿ, ಅದಕ್ಕೇನು ?

ಶ್ರೀ ರಾಮಕೃಷ್ಣ ಹೆಗ್ಡೆ.—ಇಲ್ಲ, ಹೇಳುವುದಿಲ್ಲ. ಬಿಹಾರದಲ್ಲಿ ಸಂಮಾರು ೫೦–೫೫ ಜನರ ಕೊಲೆ ಆಯಿತು. ಅದು ಒಬ್ಬ ಮಂತ್ರಿಗಳ ದ್ವೇಷದಿಂದ ಮಾಡಿದ್ದೆಂದು ಆರೋಪ ಬಂತು. ಅವರ ಬಗೆ ಪಾರ್ಲಿಮೆಂಟ್ ಸದಸ್ಯರು ವಿಚಾರವನ್ನೇ ಎತ್ತಲಿಲ್ಲ. ಆದರೆ ಇಲ್ಲಿ ಒಬ್ಬ ವ್ಯಕ್ತಿ ಅದೃಷ್ಟ ಆದರೆ,

ಪಾರ್ಲಿಮೆಂಟಿನ ಕಾಂಗ್ರೆಸ್ ಸದಸ್ಯರು ಈ ವಿಷಯವನ್ನು ತೆಗೆಯುತ್ತಾರೆ. ಇದರ ಹಿನ್ನೆಲೆ ಏನಿದೆ ?

(ಗೊಂದಲ)

ಈಗ ಒಬ್ಬ ವ್ಯಕ್ತಿ ದೃಷ್ಟನಾದನೆಂದರೆ ೬ ಜನ ಕಾಂಗ್ರೆಸ್ ಎಂ.ಪಿ.ಗಳು ಒಂದು ಸ್ಟೇಟ್‌ಮೆಂಟ್ ಕೊಡುತ್ತಾರೆ ಅಲ್ಲಿ. ಇದೇ ಸಾಕು.

(ಗೊಂದಲ)

ಅಧ್ಯಕ್ಷರು.—ಇಲ್ಲಿಗೆ ಈ ವಿಚಾರ ಮುಕ್ತಾಯವಾಯಿತು. ಈಗ ಬರಗಾಲದ ಮೇಲೆ ಚರ್ಚೆ.

ಶ್ರೀ ರಾಮಕೃಷ್ಣ ಹೆಗ್ಡೆ.—ಮಾನ್ಯ ಅಧ್ಯಕ್ಷರೇ, ಈಗ ಒಂದು ಕೆಲಸ ಮಾಡೋಣ. ನಾನು ಏನು ತಿಳಿದುಕೊಂಡಿದ್ದೆನೆಂದರೆ, ಮುಖ್ಯವಾಗಿ ನನ್ನ ಮನಸ್ಸಿನಲ್ಲಿ ಈ ಸ್ನೇಹಿತರು ಇದ್ದರು. ಸಿ.ಬಿ.ಐ. ಎನ್‌ಕ್ವೈರಿ ವಿಚಾರದಲ್ಲಿ ನಾನು ಒಂದು ತೀರ್ಮಾನವನ್ನು ತೆಗೆದುಕೊಂಡಾಗ ನನ್ನ ಮನಸ್ಸಿನಲ್ಲಿ ಇದ್ದಂತಹ ವ್ಯಕ್ತಿಗಳು ನಮ್ಮ ಕಾಂಗ್ರೆಸ್ ಸ್ನೇಹಿತರು. ಅವರ ಮನಸ್ಸಿನಲ್ಲಿ ಏನಾದರೂ ಸಂದೇಹ ಇರಬಹುದು, ಅದನ್ನು ನಿವಾರಣೆ ಮಾಡುವುದಕ್ಕೆ ಸಿ.ಬಿ.ಐ. ಎನ್‌ಕ್ವೈರಿ ಮಾಡುವ ನಿರ್ಣಯವನ್ನು ನಾನು ತೆಗೆದುಕೊಂಡಿದ್ದೇನೆ. ಈಗ ಅದಕ್ಕೆ ಸಮ್ಮತಿ ಇಲ್ಲ ಎಂದು ಹೇಳುವುದಾದರೆ ಜ್ಯುಡಿಷಿಯೆಲ್ ಎನ್‌ಕ್ವೈರಿಯನ್ನೇ ಮಾಡಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಸಿ.ಬಿ.ಐ. ಎನ್‌ಕ್ವೈರಿಗೆ ಒಪ್ಪಿದ್ದೇವೆ.

ಶ್ರೀ ರಾಮಕೃಷ್ಣ ಹೆಗ್ಡೆ.—ಮತ್ತೆ ಅಲ್ಲಿಗೇ ಮುಗಿಸಿ. ಇದಕ್ಕೆ ಚರ್ಚೆ ಏತಕ್ಕೆ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇನ್‌ವೆಸ್ಟಿಗೇಷನ್ ಮಾಡಲು ವುದಕ್ಕೆ ತೊಂದರೆ ಇದೆ ಆದರೆ ಚರ್ಚೆ ಮಾಡುವುದಕ್ಕೆ ತೊಂದರೆ ಏನಿದೆ ?

ಶ್ರೀ ರಾಮಕೃಷ್ಣ ಹೆಗ್ಡೆ.—ನಿಮ್ಮ ಹಾಗೆ ನಾನು ಯಾವುದಕ್ಕೂ ಹಿಂದೆ ಮುಂದೆ ನೋಡುವುದಕ್ಕೆ ಹೋಗುವುದಿಲ್ಲ.

ಅಧ್ಯಕ್ಷರು.—ಸಿ.ಬಿ.ಐ.ಯೂ ಆಯಿತು, ಜ್ಯುಡಿಶಿಯಲ್ ಎನ್‌ಕ್ವೈರಿಯಾದರೂ ಬೇಕಾದರೆ ಮಾಡಿಸುತ್ತೇನೆಂದು ಹೇಳಿದ ಮೇಲೆ ಚರ್ಚೆ ಇನ್ನೇಕೆ ?

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.—ನಾವು ಸಿ.ಬಿ.ಐ. ತನಿಖೆ ಬೇಡ ಎಂದು ಹೇಳಿದೆವೇ ?

(ಗೊಂದಲ)

೧-೫೦ ಪಿ.ಎಂ.

ಅಧ್ಯಕ್ಷರು.—ದಯವಿಟ್ಟು ಕೇಳಿ. ಈಗ ಮಾನ್ಯ ಮುಖ್ಯ ಮಂತ್ರಿಗಳವರು ಕ್ರಿಯಾಲೋಪವನ್ನು ಎತ್ತಿ ಆವರು ಏನು ಹೇಳಿದ್ದಾರೆಂದರೆ ಸಿ.ಬಿ.ಐ. ಎನ್‌ಕ್ವೈರಿಗೆ ಹಾಕಿದ್ದೇನೆಂದು ಹೇಳಿದ್ದಾರೆ. ನೀವು ಇಷ್ಟಪಟ್ಟರೆ ಜುಡೀಷಿಯಲ್ ಎನ್‌ಕ್ವೈರಿ ಮಾಡಿಸುತ್ತೇನೆಂದು ಹೇಳಿದ್ದಾರೆ. ರಷೀದ್‌ರವರ ವಿಷಯ ಇಲ್ಲಿಗೆ ಮುಕ್ತಾಯವಾಗಿದೆ. ದಯವಿಟ್ಟು ಬರಗಾಲದ ಬಗ್ಗೆ ಚರ್ಚೆಗೆ ಅವಕಾಶ ಮಾಡಿಕೊಡಿ. ಈಗ ಬರಗಾಲದ ಬಗ್ಗೆ ಚರ್ಚೆ ಮಾಡೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇದರಲ್ಲಿ ಅನೇಕ ವಿಷಯಗಳು ಹೊರಗಡೆ ಬರುತ್ತವೆ. ಅವರಿಗೆ ಅನುಕೂಲವಾಗುತ್ತದೆ, ಸಿ.ಬಿ.ಐ. ಎನ್‌ಕ್ವೈರಿ ಎಂದರೆ ಅದು ಇನ್‌ವೆಸ್ಟಿಗೇಷನ್. ಇಲ್ಲಿ ಸಬ್-ಜುಡೀಸ್ ಆಗತಕ್ಕ ಪ್ರಶ್ನೆ ಬರುವುದಿಲ್ಲ. The House will be feeding the information. ಇದರಲ್ಲಿ ತಾಪತ್ರಯ ಏನಾಗುತ್ತದೆ ?

ಅಧ್ಯಕ್ಷರು.—ಈಗ ಬರಗಾಲದ ಬಗ್ಗೆ ಚರ್ಚೆ ಮಾಡಬೇಕು. ಮಾನ್ಯ ಧರ್ಮಪ್ಪನವರೇ ಪ್ರಾರಂಭ ಮಾಡಿ.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.—ತಾವು ಸಮಾಧಾನದಿಂದ ಕೇಳಬೇಕು. ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದುದು ನಮಗೆ ಗೊತ್ತಿಲ್ಲದೆ ಇಲ್ಲ.

ಅಧ್ಯಕ್ಷರು.—ನಾನಂ ಅಲೋ ಮಾಡುವುದಕ್ಕೆ ಸಾಧ್ಯವಿಲ್ಲ I have got highest regards for you. You have served as Speaker of this House. ತಾವು ದಯವಿಟ್ಟು ಕುಳಿತುಕೊಳ್ಳಿ.

SRI M. RAGHUPATHY.—The Chair has already given a ruling.

(ಗೊಂದಲ)

ಅಧ್ಯಕ್ಷರು.—ಈಗ ಬರಗಾಲದ ಚರ್ಚೆ ಪ್ರಾರಂಭ ಮಾಡಬೇಕು. ಜನರು ಕೂಳು ಇಲ್ಲದೆ ಸಾಯುತ್ತಿದ್ದಾರೆ. ಆ ವಿಚಾರವನ್ನು ದಯವಿಟ್ಟು ಇಲ್ಲಿಗೆ ಬಿಡಿ. ಎಲ್ಲರೂ ಕುಳಿತುಕೊಳ್ಳಿ ತಾವು ಆರಂ ವರ್ಷಗಳ ಕಾಲ ಅಧ್ಯಕ್ಷರಾಗಿ ಕೆಲಸ ಮಾಡಿದ್ದೀರಿ.

ಶ್ರೀ ಎಂ. ರಘುಪತಿ.—ಅಧ್ಯಕ್ಷರು ರೂಲಿಂಗ್ ಕೊಟ್ಟವೇಲೆ ಪುನಃ ಚರ್ಚೆ ಮಾಡುವುದು ಎಂದರೇನು ?

ಶ್ರೀಮತಿ ಕೆ. ಎಸ್. ನಾಗರತ್ನಮ್ಮ —ನಾನಂ ರಿಕ್ವೆಸ್ಟ್ ಮಾಡುತ್ತಿದ್ದೇನೆ. ನೀವೇನು ಹೇಳುವುದು ? ನನಗೆ ನೀವೇನು ಡೈರೆಕ್ಟಾಗಿ ಹೇಳುವುದು ? ನಾನಂ ಅಧ್ಯಕ್ಷರನ್ನು ನನ್ನ ಮಾತನ್ನು ಕೇಳಬೇಕೆಂದಂ ರಿಕ್ವೆಸ್ಟ್ ಮಾಡಿಕೊಳ್ಳುತ್ತಿದ್ದೇನೆ. ರಿಕ್ವೆಸ್ಟ್ ಮಾಡುತ್ತಿದ್ದೇನೆ, ರಘುಪತಿಯವರು ನಿಮ್ಮ ಮಂತ್ರಾಂತರ ಮಾತನಾಡಲಿ. ನನ್ನ ಎದುರಿಗೆ ಮಾತನಾಡುವುದಂ ಬೇಡ. Let him address the Chair. He need not address me directly. ತಾವು ಈ ವಿಷಯವನ್ನು ರೀ-ಕನ್ಸೀಡರ್ ಮಾಡಬೇಕು.

ಅಧ್ಯಕ್ಷರು.—ಅದು ಮುಕ್ತಾಯವಾಗಿದೆ. ದಯವಿಟ್ಟು ಬರಗಾಲದ ಚರ್ಚೆಗೆ ಅವಕಾಶ ಕೊಡಿ. The matter has been closed. The ruling has been given Nothing will be recorded pertaining to that subject.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.—ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಅಧ್ಯಕ್ಷರು.—ತಾವು ನನ್ನ ಗಮನಕ್ಕೆ ತಂದಿದ್ದೀರಿ, ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ತಂದಿದ್ದೀರಿ, ಆ ವಿಷಯ ಮುಕ್ತಾಯವಾಗಿದೆ.

ಶ್ರೀ ಎಂ. ವಲ್ಲಿಕಾರ್ಜುನ ಖರ್ಗೆ.—ಸರ್ಕಾರ ಮುಂಕ್ತ ಚರ್ಚೆಗೆ ಯಾವಾಗ ಅವಕಾಶ ಕೊಡುವುದಿಲ್ಲವೋ, ಅನೇಕ ವಿಷಯಗಳನ್ನು ಮುಚ್ಚುವುದಕ್ಕೋಸ್ಕರ ಚರ್ಚೆಗೆ ಒಪ್ಪುತ್ತಿಲ್ಲವೆಂದು ಹೇಳಬೇಕಾಗಿದೆ. ಅದಕ್ಕೋಸ್ಕರ ನಾವು ಪ್ರತಿಭಟಿಸಿ ಸರ್ಕಾರ ಚರ್ಚೆಗೆ ಅವಕಾಶ ಕೊಡದೇ ಇರುವುದರಿಂದ ಕೆಲವು ಫ್ಯಾಕ್ಟ್ಸ್‌ಗಳನ್ನು ಸಪ್ರೆಸ್ ಮಾಡುತ್ತಿದ್ದಾರೆ. ಸರ್ಕಾರದ ಈ ವರ್ತನೆಯಂನ್ನು ನಾವು ಪ್ರತಿಭಟಿಸಿ ಸಭಾತ್ಯಾಗ ಮಾಡುತ್ತಿದ್ದೇವೆ.

(ಈ ಸಂದರ್ಭದಲ್ಲಿ ವಿರೋಧಪಕ್ಷದ ನಾಯಕರು ಮೊದಲ್ಗೊಂಡಂ ಕಾಂಗ್ರೆಸ್ (ಐ) ಸದಸ್ಯರು ಸಭಾತ್ಯಾಗ ಮಾಡಿದರು.)

ಅಧ್ಯಕ್ಷರಂ.—ಈಗ ಧರ್ಮಪ್ಪನವರಂ ಬರಗಾಲದ ಬಗ್ಗೆ ಚರ್ಚೆಯನ್ನು ಪ್ರಾರಂಭ ಮಾಡಲಿ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ, ವಿರೋಧ ಪಕ್ಷದವರು ವಾಕ್‌ಔಟ್ ಮಾಡಿದರು. ಇದರಿಂದ ಗೊತ್ತಾಗುತ್ತದೆ ಈ ವಿಚಾರದಲ್ಲಿ ಇವರಿಗೆ ಅನಾವಶ್ಯಕವಾದಂಥ ವಿಶೇಷ ಆಸಕ್ತಿ ಎಷ್ಟು ಇದೆಯೆಂದು ಪಾರ್ಲಿಮೆಂಟಿನಲ್ಲಿ ಆರು ಜನ ಕಾಂಗ್ರೆಸ್ ಪಕ್ಷದ ಸದಸ್ಯರು ಇದರ ಬಗ್ಗೆ ಹೇಳಿಕೆ ಕೊಡತ್ತಾರೆ. ಬಿಹಾರ್‌ದಲ್ಲಿ ೬೬ ಜನ ಮೃತರಾಗಿ ಇದರ ಬಗ್ಗೆ ವಿರೋಪ ಅಲ್ಲಿಯ ಮಂತ್ರಿಗಳ ಮೇಲಿದ್ದಾಗ ಒಬ್ಬ ಕಾಂಗ್ರೆಸ್ (ಐ) ಎಂ.ಪಿ. ಯಾದರೂ ಇದರ ಬಗ್ಗೆ ಪ್ರಸ್ತಾಪ ಕೂಡ ಮಾಡಲಿಲ್ಲ. ಬೋಫಾರ್ಸ್, ಸಬ್‌ಮೆರಿನ್ ಡೀಲ್ ನಂತರ ಮುಚ್ಚಿಟ್ಟುಕೊಳ್ಳಲಿಕ್ಕೆ ಈ ತರಹ ಎಲ್ಲಾ ತಂತ್ರವನ್ನು ಇವರಂ ಮಾಡಿಕೊಳ್ಳುತ್ತಾ ಇದ್ದಾರೆ ಅಷ್ಟೆ.

ಅಧ್ಯಕ್ಷರಂ.—ಶ್ರೀ ಧರ್ಮಪ್ಪನವರೇ, ನೀವು ಮಾತನಾಡಿ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಮುಖ್ಯ ಮಂತ್ರಿಯವರಲ್ಲಿ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ ಇವತ್ತು ಕೇಂದ್ರದಲ್ಲಿ ಪರಿಸ್ಥಿತಿ ಬೇಕಾದ್ದು ಇರಬಹುದಂ.

ಸಾಕಷ್ಟು ಭ್ರಷ್ಟಾಚಾರ ನಡೆಯುತ್ತಿರುವುದು ದೇಶಕ್ಕೇ ಗೊತ್ತಿದೆ. ಈ ರೀತಿ ಬರಗಾಲದ ಬಗ್ಗೆ ಸಾಕಷ್ಟು ಬೆಳಕು ಜಿಲ್ಲಾಕ್ಕಂಥ ಸಂದರ್ಭದಲ್ಲಿ ಕರ್ನಾಟಕ ರಾಜ್ಯದಲ್ಲಿ ಅನೇಕ ಸಮಸ್ಯೆಗಳಿವೆ. ಇಂತಹ ಸಂದರ್ಭದಲ್ಲಿ ತಾವು ಇವತ್ತು ಜನತೆಯ ಹಿತದೃಷ್ಟಿಯಿಂದ ಪ್ರಾಮಾಣಿಕವಾದ ಪ್ರಯತ್ನ ಮಾಡಬೇಕ ನಿಜವಾದ ಚರ್ಚೆ ಆಗಬೇಕಿತ್ತು, ರಾಜ್ಯದ ಜನತೆಯ ಬಗ್ಗೆ ಚರ್ಚೆ ಆಗಬೇಕು. ಆದರೆ ಇದು ಆಗುತ್ತಿಲ್ಲ ದಯವಿಟ್ಟು ವಿರೋಧಪಕ್ಷದ ಸದಸ್ಯರು ಚರ್ಚೆಯಲ್ಲಿ ಭಾಗವಹಿಸುವುದಕ್ಕೆ ಅವಕಾಶ ಮಾಡಿ ಕೊಡಿ. ರಾಜ್ಯದ ಹಿತದೃಷ್ಟಿಯಿಂದ ಕೆಲಸ ಮಾಡಬೇಕಾಗಿದೆಯೆಂದು ನಾನು ಸರ್ಕಾರವನ್ನು ವಿನಂತಿಮಾಡಿ ಕೊಳ್ಳುತ್ತೇನೆ. ರಾಜ್ಯದಲ್ಲಿ ಅಂಧಕಾರ ಮೂಡುತ್ತಿದೆ, ತಿನ್ನಲಿಕ್ಕೆ ಇಲ್ಲದೆ ಜನ ಸಾಯುತ್ತಿದ್ದಾರೆ. ಪರಿಸ್ಥಿತಿಯನ್ನು ಗಂಭೀರವಾಗಿ ಪರಿಗಣಿಸಿ ಸಮಸ್ಯೆಯನ್ನು ಬಗೆಹರಿಸಲಿಕ್ಕೆ ತಾವು ಪ್ರಾಮಾಣಿಕ ನೀತಿ ಯಿಂದ ಕಾರ್ಯಪ್ರವೃತ್ತರಾಗಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ರಾಜ್ಯದಲ್ಲಿ ತಲೆದೋರಿರುವ ಭೀಕರ ಬರಗಾಲದ ಬಗ್ಗೆ ಚರ್ಚೆ

†ಶ್ರೀ ಬಿ. ಧರ್ಮಪ್ಪ (ಸಾಗರ್).—ಸನ್ಮಾನ್ಯ ಅಧ್ಯಕ್ಷರೇ, ಈಗಾಗಲೇ ನಿನ್ನೆಯಿಂದ ಈ ಬರಗಾಲ ಪರಿಸ್ಥಿತಿ ಬಗ್ಗೆ ಚರ್ಚೆ ನಡೆಯುತ್ತಿದೆ. ಈ ಸಂದರ್ಭದಲ್ಲಿ ವಿಶೇಷವಾಗಿ ನಾನು ಮಲೆನಾಡು ಭಾಗದಿಂದ ಬಂದವನು.

ಅಧ್ಯಕ್ಷರು.—ತಾವೆಲ್ಲರೂ ಈಗ ಹತ್ತು ಹತ್ತು ನಿಮಿಷ ಮಾತನಾಡಬೇಕು, ಅಷ್ಟೆ

ಶ್ರೀ ಬಿ. ಧರ್ಮಪ್ಪ.—ಬಯಲು ಸೀಮೆಯಲ್ಲಿ ಧಾರವಾಡದಲ್ಲಿ ಬೀದರ್‌ದಲ್ಲಿ ಬರಗಾಲ ಬರುತ್ತದೆ ಆದರೆ ನಮ್ಮಲ್ಲಿ ಇಲ್ಲವೆಂದು ತಿಳಿದುಕೊಂಡಿದ್ದರು. ಆದರೆ ಬರಬರುತ್ತ ಇದು ಮಲೆನಾಡು ಭಾಗವನ್ನು ವಂಟ್ಟಿದೆ. ಆದರಲ್ಲೂ ನಮ್ಮ ಸಾಗರ, ಹೊಸನಗರ, ತೀರ್ಥಹಳ್ಳಿ, ಕೊಪ್ಪ, ಶೃಂಗೇರಿ ಭಾಗಗಳಲ್ಲಿ ಎಂದೂ ಬರಗಾಲ ನೋಡಿರಲಿಲ್ಲ. ಈ ಸಲ ಮೊದಲಬಾರಿಗೆ ಬರಗಾಲ ತಲೆದೊರಿರುವುದರಿಂದ ನಮ್ಮಲ್ಲಿ ವಯಸ್ಸಾದವರು ಹೇಳುತ್ತಾರೆ, ನಮ್ಮಲ್ಲಿ ಎಂದೂ ಈ ತರಹ ಸ್ಥಿತಿ ಬಂದಿರಲಿಲ್ಲ ಎಂದು. ಈ ವರ್ಷ ಶರಾವತಿಯಲ್ಲಿ ನೀರು ತುಂಬುವಂಥ ಸ್ಥಿತಿಯಲ್ಲಿ ಇಲ್ಲ. ಮಾನ್ಯ ಕಂದಾಯ ಸಚಿವರೂ ಅನೇಕಸಾರಿ ಬದಲಿ ಬೆಳೆ ಬೆಳೆಯಿರಿ ಎಂದು ಹೇಳುತ್ತಾರೆ. ಮಲೆನಾಡಿನಲ್ಲಿ ಇದುವರೆಗೂ ಬದಲಿ ಬೆಳೆ ಬೆಳೆಯುವ ಅವಶ್ಯಕತೆ ಬಂದಿರಲಿಲ್ಲ. ಈ ವಿಷಯ ಅವರಿಗೆ ಗೊತ್ತೇ ಇಲ್ಲ. ಏಕೆಂದರೆ ಬದಲಿ ಬೆಳೆ ಬೆಳೆಯಬೇಕು ಎಂದರೆ ಸಾಕಷ್ಟು ಬೆಳೆ ಹಾಳಾಗಿ ಹೋಗಿದೆ. ಆದ್ದರಿಂದ ಬದಲಿ ಬೆಳೆ ಬೆಳೆಯಬೇಕಾದರೆ ಸರ್ಕಾರದ ವರೇ ಎಲ್ಲೆಲ್ಲಿ ಬೆಳೆ ಹಾಳಾಗಿದೆ, ಅಲ್ಲಿ ಬೀಜ ಮತ್ತು ಇತರ ಅವಶ್ಯಕತೆಗಳನ್ನು ಒದಗಿಸುವುದಕ್ಕೆ ಸಾಧ್ಯ ವಿದ್ದರೆ ಮಾತ್ರ ಬದಲಿ ಬೆಳೆ ಬೆಳೆಯಲು ಸಾಧ್ಯವಿದೆ. ಮತ್ತೊಂದು ದೋಷ ಏನಾಗಿದೆ ಎಂದರೆ, ಸರ್ಕಾರದವರು ಕೆಲವು ಅಂಕೆಅಂಶಗಳ ಸರಾಸರಿ ಲೆಕ್ಕಹಿಡಿದು ಇಷ್ಟು ಮಳೆಯಾದರೆ ಇಷ್ಟು ಬೆಳೆಯಾಗಿದೆ ಎಂದು, ಬ್ರಿಟಿಷರ ಕಾಲದಲ್ಲಿ ಮಾಡಿದ ರೂಲ್ಸನ್ನು ಆಧಾರವಾಗಿಟ್ಟುಕೊಂಡಿದ್ದಾರೆ. ಸರಾಸರಿ ಲೆಕ್ಕ ಹಾಕಿ ಯಾವನೋ ಒಬ್ಬ ಒಂದು ಅಡಿ, ಎರಡು ಅಡಿ, ಹದಿನೈದು ಅಡಿ ಸೇರಿಸಿ ಒಟ್ಟು ಸರಾಸರಿ ನಾಲ್ಕೂವರೆ ಅಡಿ ಬರುತ್ತದೆ ಎಂದು ಹೊಳೆಗೆ ಹಾರಿದನಂತೆ ನಿಜವಾಗಿಯೂ ನಮ್ಮಲ್ಲಿ ಮಳೆ ಬೇಕಾದ ಸಂದರ್ಭದಲ್ಲಿ ಬಿದ್ದಿದೆಯೇ ಎಂದು ಪರಿಶೀಲನೆ ಮಾಡಬೇಕು. ಮಲೆನಾಡಿನಲ್ಲಿ ಬಿತ್ತಿದ ಸಸಿಯನ್ನು ಎರಡೂವರೆ ತಿಂಗಳಾದರೂ ಕೆತ್ತು ನಾಟಿ ಮಾಡುವಂಥ ಪರಿಸ್ಥಿತಿ ಒದಗಿಲ್ಲ. ಒಂದು ವಾರದ ಹಿಂದೆ ಸ್ವಲ್ಪ ಮಳೆ ಬಂತು ಆದರೆ ಇದರಿಂದ ಏನೂ ಪ್ರಯೋಜನ ಆಗಲಿಲ್ಲ, ಏನಾದರೂ ಒಣ ಮಾತ್ರ ಖುಷ್ಕಿ ಬೆಳೆಗೆ ಅನುಕೂಲವಾಗುತ್ತದೆ. ಆದರೆ ಮಲೆನಾಡಿನಲ್ಲಿ ಅಂತಹ ಖುಷ್ಕಿ ಬೆಳೆಯನ್ನು ಪ್ರಧಾನ ವಾಗಿ ಬೆಳೆಯುತ್ತಿಲ್ಲ. ಇಂತಹ ಪರಿಸ್ಥಿತಿ ಒಂದು ಕಡೆ ಇದೆ. ಈ ಸಂದರ್ಭದಲ್ಲಿ ನಾನು ಸರ್ಕಾರವನ್ನು ಬೇಡಿಕೊಳ್ಳುವುದು ಇಷ್ಟೆ ಇಡೀ ಶಿವಮೊಗ್ಗ ಜಿಲ್ಲೆಯನ್ನು ಬರಗಾಲ ಪ್ರದೇಶವೆಂದು ತೀರ್ಮಾನ ಮಾಡಬೇಕು. ಮಲೆನಾಡಿನ ಭಾಗಗಳಲ್ಲಿ ಕೆಲವು ಹಳ್ಳಿಗಳನ್ನು ಅಧಿಕಾರಿಗಳು ಕೈಬಿಟ್ಟಿದ್ದಾರೆ. ಸಾಗರ, ಹೊಸನಗರ, ಶಿಕಾರಿಪುರ ಮತ್ತು ಸೊರಬ ತಾಲ್ಲೂಕುಗಳು ವಿಶೇಷವಾಗಿ ತೊಂದರೆಗೆ ಒಳಗಾಗಿವೆ. ಇಲ್ಲಿ ವಿಪರೀತ ಬರಗಾಲ ಆವರಿಸಿದೆ. ವರ್ಷೇ ವರ್ಷೇ ಬರಗಾಲ ಬರುವಂಥ ಸಂದರ್ಭದಲ್ಲಿ, ನಾನು ಕಂದಾಯ ಸಚಿವರಲ್ಲಿ ಬೇಡಿಕೊಳ್ಳುವುದು ಇಷ್ಟೆ. ಬರಗಾಲ ಕ್ಷೇಮ ನಿಧಿಯನ್ನು ರಾಜ್ಯದಲ್ಲಿ ಖಾಯಂ ಆಗಿ ಇಟ್ಟರೆ ಏನಾದರೂ ಒಳ್ಳೆಯದಾಗಬಹುದು. ಎಷ್ಟು ವರ್ಷಗಳಿಂದ ನೋಡಿದರೂ ಕೂಡ ಈ ಬರಗಾಲವನ್ನು ತಪ್ಪಿಸುವುದಕ್ಕೆ ಸಾಧ್ಯವೇ ಇಲ್ಲ ಎನ್ನುವ ಸ್ಥಿತಿ ಮುಟ್ಟಿದ್ದೇವೆ. ಆದ್ದರಿಂದ ಬರಗಾಲ